ನಿನ್ನ ಮಡದಿಗೆ ಹರ್ಷೋನ್ಮಾದ
ಹುಡುಕಿಕೊಳ್ಳಲೊಪ್ಪಿದೆ.

ಆದರೆ
ಆಮ್ಲತ್ವ ವಿಕೃತಗೊಳಿಸಿದ
ಪ್ರತಿಮೆಗಳು
ನನ್ನ ಬಟ್ಟಲೊಳಗೆ ಬಿದ್ದಂತೆ
ನಾನು ಕಂಡೆ.
ಹೇಗೋ
ಮಾತುಗಳು, ಚೇಷ್ಟೆಗಳು ಪರಿಚಿತವೆನಿಸಿದವು.
ಹೌದು,
ನಾನು ಏಕಾಂಗಿಯಾಗಿ ಹಾಡುತ್ತಿರುವೆ,
ನನ್ನ ಹಾಡುಗಳು ಏಕಾಂತವಾಗಿದ್ದವು,
ಆದರೆ ಆ ಹಾಡುಗಳು
ಲೋಕದ ಬೆಳಕು ಕಾಣದ
ಕೊನೆಯ ಅಂಚಿನಾಚೆ ಮಾರ್ದನಿಸುತ್ತಿವೆ.

ಆಗ
ಅಲ್ಲಿ ಮುಜುಗರಗೊಳ್ಳದ
ಯಾವ ನಿದ್ದೆಯೂ ಇಲ್ಲವಾಗಿದ್ದವು,
ಪೂರ್ವಕಾಲದ
ಎಲ್ಲಾ ಹಸಿವು ಎಚ್ಚರವಾಗಿದ್ದವು.

ಬಹುಶಃ
ನನಗೆ ದಾರಿ ತಪ್ಪಿರಬಹುದು
ಬಹುಶಃ
ನಾನು ಬಳಸು ದಾರಿಯಲಿ ನಡೆದಿರಬಹುದು.

ಕುರುಡಿಯಾದ ಮಡದಿ
ಕಳೆದುಹೋದ ಗಂಡನನ್ನು
ಹೇಗೆ ಪತ್ತೆಹಚ್ಚಿಯಾಳು?

ಕಿವುಡಿಯಾದ ಮಡದಿ
ತನ್ನ ಗಂಡನ ಕರೆಯನ್ನು
ಹೇಗೆ ಕೇಳಿಯಾಳು?



# ಕನ್ನಡಿ

ಪ್ರೀತಿಸುವುದಕ್ಕೊಬ್ಬ ಗಂಡಸು ಸುಲಭವಾಗಿ ಸಿಗಬಲ್ಲ
ಒಬ್ಬ ಹೆಣ್ಣೆಂಬ ಮಟ್ಟಕ್ಕೆ ಪ್ರಾಮಾಣಿಕಳಾಗಿರು,
ಅವನ ಜೊತೆಗೆ ನಿಲವುಗನ್ನಡಿಯ ಎದುರು
ಬೆತ್ತಲೆಯಾಗಿ ನಿಲ್ಲು.
ಅಂತೆಯೆ ನೀನು ಅವನು ಶಕ್ತನೆಂದು ಕಂಡುಕೊಳ್ಳಬಲ್ಲೆ
ಅದರಂತೆಯೇ ವಿಶ್ವಾಸವನ್ನು ಹೊಂದಬಲ್ಲೆ
ನೀನು ಹೆಚ್ಚೆಚ್ಚು ಶಾಂತಳೂ ತುಂಬು ಯೌವನೆಯೂ
ಪ್ರೇಮ ನಿರ್ಭರಳೂ ಆಗಬಲ್ಲೆ.

ನಿನ್ನ ಪ್ರೇಮಾದರಗಳನ್ನು ಅವನಿಗೆ ಮನಬಿಚ್ಚಿ ತಿಳಿಸು,
ಅವನ ಅವಯವಗಳ ಪೂರ್ಣತೆ ಗಮನಿಸು:
ಷವರಿನ ಕೆಳಗೆ ಕೆಂಪಾಗುವ ಅವನ ಕಣ್ಣುಗಳನ್ನು
ಸ್ನಾನದ ಮನೆಯಿಂದ ಹೆಜ್ಜೆಹಾಕುತ್ತಾ ಬರುವ–
ಲಜ್ಜೆ ತುಳುಕುವ ನಡಿಗೆಯನ್ನು